ಶಿಕ್ಷಕೇತರ ಹುದ್ದೆಗಳು ೨೬. ಎಲ್ಲಾ ಹುದ್ದೆಗಳನ್ನು ನೇಮಕ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಎರಡು ಮೂರು ತಿಂಗಳಲ್ಲಿ ಖಾಲಿಯಿರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುವ ನಿರೀಕ್ಷೆಯಿದೆ.

ಅಧ್ಯಕ್ಷರು.— ಮಾನ್ಯ ಮಂತ್ರಿಗಳು ಇಷ್ಟು ದೊಡ್ಡ ಉತ್ತರ ಕೊಟ್ಟರೆ ಬಹಳ ಕಷ್ಟವಾಗುತ್ತದೆ. ತಮ್ಮ ಹೇಳಿಕೆಯನ್ನು ಇಲ್ಲಿ ಓದುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ರಾಚಯ್ಯ.—ಕಾಲೇಜುಗಳಲ್ಲಿ ಉಪನ್ಯಾಸಕರು, ರೀಡರ್, ಪ್ರಾಧ್ಯಾಪಕರ ೮೧ ಹುದ್ದೆಗಳು ಖಾಲಿಯಿವೆ. ೧೩ ಜನ ಉಪನ್ಯಾಸಕರುಗಳಿಗೆ ರೀಡರ್‌ಗಳಾಗಿ ಬಡ್ತಿ ಕೊಡಲಾಗಿದೆ. ಮೊನ್ನೆ ಇದರ ಬಗ್ಗೆ ಸಭೆಯಲ್ಲಿ ಪ್ರಶ್ನೆಗಳಿಗೆ ಉತ್ತರ ಹೇಳುವಾಗ ಹೇಳಿದ್ದೇನೆ. ೧೬ ಜನ ರೀಡರ್‌ಗಳಿಗೆ ಪ್ರೊಫೆಸರ್ ಗಳಾಗಿ ಬಡ್ತಿ ನೀಡಿರುವ ಆರ್ಡರ್ ಈಗಾಗಲೇ ಹೊರಡಿಸಿದ್ದೇವೆ.. ಪಟ್ಟಿ ಬಹಳ ಉದ್ದವಿದೆ ಅದನ್ನು ಸಭೆಯಮುಂದೆ ಇಡುತ್ತೇನೆ.

ಶ್ರೀ ಕೆ. ರಾಮಭಟ್.—ಜಿಲ್ಲಾಪಟ್ಟದ ನೇಮಕಾತಿ ಸಮಿತಿಗಳವರು ಹಣದ ಕೊರತೆ ಇರುವುದ ರಿಂದ ನೇಮಕ ಮಾಡುವುದನ್ನು ಉದ್ದೇಶಪೂರ್ವಕವಾಗಿ ಸರ್ಕಾರದವರು ತಡಮಾಡುತ್ತಿದ್ದಾರೆಂದು ಗೊತ್ತಾಗಿದೆ, ಇದು ನಿಜವೆ?

ಶ್ರೀ ಬಿ. ರಾಚಯ್ಯ.—ವಿದ್ಯಾ ಇಲಾಖೆಯಲ್ಲಿ ಖಾಲಿಯಿರತಕ್ಕ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಯಾವುದೇ ರೀತಿಯ ಹಣದ ಕೊರತೆಯಿಲ್ಲ. ಅದಕ್ಕೆ ಸಂಪೂರ್ಣವಾಗಿ ಮಂತ್ರಿಮಂಡಲದ ಅನುಮತಿ ಇದೆ. ಖಾಲಿಯಿರತಕ್ಕ ಹುದ್ದೆಗಳನ್ನು ಭರ್ತಿ ಮಾಡತಕ್ಕ ಕೆಲಸಕಾರ್ಯಗಳು ನಡೆಯುತ್ತಿವೆ.

ಶ್ರೀ ಬಿ. ಸ್ವಾಮಿರಾವ್.—ಶಿವಮೊಗ್ಗ ಜಿಲ್ಲೆಯ ಜಿಲ್ಲಾಮಟ್ಟದ ನೇಮಕಾತಿ ಸಮಿತಿಯಲ್ಲಿ ನೇಮಕ ಮಾಡಿಕೊಳ್ಳುವಾಗ ರೇಟ್ ಬಹಳ ಜಾಸ್ತಿಯಾಗಿದೆಯೆಂದು ಗೊತ್ತಾಗಿದೆ, ಇದು ನಿಜವೆ?

ಶ್ರೀ ಬಿ. ರಾಚಯ್ಯ.—ಲಂಚನಿರೋಧ ಶಕ್ತಿಯೊಂದಿದೆ, ತಾವು ಶಾಸಕರಾಗಿ ಲಂಚ ತೆಗೆದು ಕೊಳ್ಳುತ್ತಾರೆಂದು ಆರೋಪ ಮಾಡುವುದಕ್ಕೆ ಬದಲಾಗಿ, ಇಂಥಿಂಥ ಕಡೆ ಲಂಚ ತೆಗೆದುಕೊಳ್ಳುತ್ತಾ ರೆಂದು ಅವರಿಗೆ ತಿಳಿಸಿ, ಇಲ್ಲದಿದ್ದರೆ ನಮಗಾದರೂ ತಿಳಿಸಬೇಕು. ಹಾಗೆ ಮಾಡಿದರೆ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಬರುತ್ತದೆ.

ಶ್ರೀ ವಿ. ಧನಂಜಯಕುಮಾರ್.—ಮಾನ್ಯ ಮಂತ್ರಿಗಳು ಉದ್ದುದ್ದ ಉತ್ತರ ಕೊಡುವುದಕ್ಕೆ ಬದಲಾಗಿ ಯಾವ ಶಾಲೆಗಳಲ್ಲಿ ಶಿಕ್ಷಕರುಗಳಿಲ್ಲ ಅಂತಹ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಮಾಡದೆ, ಪಾಸ್ ಮಾಡುವ ಕ್ರಮ ತೆಗೆದುಕೊಳ್ಳುತ್ತಾರೆಯೆ?

MR. SPEAKER.—It is not relevant.

## ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

MR. SPEAKER.—Question Hour is over,

## ಆಳಂದ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಶಾಲೆಗಳು

೨೯ (೧೭೬) ಶ್ರೀ ಬಿ. ಆರ್. ಪಾಟೀಲ್ (ಆಳಂದ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಆಳಂದ ತಾಲ್ಲೂಕಿನಲ್ಲಿ ಎಷ್ಟು ಪ್ರಾಥಮಿಕ ಶಾಲೆಗಳಿವೆ ಹಾಗೂ ಅಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯಾ ಬಲವೆಷ್ಟು?

ಆ) ಕಟ್ಟಡಗಳಲ್ಲಿರುವ ಹಾಗೂ ಕಟ್ಟಡಗಳಿಲ್ಲದ ಶಾಲೆಗಳ ಸಂಖ್ಯೆ ಎಷ್ಟು ? ಮತ್ತು ಕಟ್ಟಡ ವಿಲ್ಲದ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯಾ ಬಲವೆಷ್ಟು?

ಇ) ಕಟ್ಟಡವಿಲ್ಲದ ಗ್ರಾಮಗಳಿಗೆ ಕಟ್ಟಡಗಳನ್ನು ಒದಗಿಸಿ ಮಕ್ಕಳ ವಿದ್ಯಾರ್ಜನೆಗೆ ಅನುಕೂಲ ಮಾಡಿಕೊಡುವ ಯೋಜನೆ ಸರ್ಕಾರದವರ ಗಮನದಲ್ಲಿದೆಯೇ? ಹಾಗಿದ್ದಲ್ಲಿ ಈ ಕಾರ್ಯವನ್ನು ಯಾವಾಗ ಪೂರೈಸಲಾಗುವುದು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) ಆಳಂದ ತಾಲ್ಲೂಕಿನಲ್ಲಿ ೧೬೯ ಪ್ರಾಥಮಿಕ ಶಾಲೆಗಳಿವೆ. ಅಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ; ೨೭೮೦.

ಆ) ೧. ಕಟ್ಟಡಗಳಿರುವ ಶಾಲೆಗಳು — ೯೩

೨. ಕಟ್ಟಡಗಳಿಲ್ಲದ ಶಾಲೆಗಳು — ೭೬

೩. ಕಟ್ಟಡಗಳಿಲ್ಲದ ಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ : — ೨೨೮೭

ಇ) ಶಾಲಾ ಕಟ್ಟಡವಿಲ್ಲದ ಗ್ರಾಮಗಳಿಗೆ ಶಾಲಾ ಕೊಠಡಿಗಳನ್ನು ಕಟ್ಟಲು ಈ ಕೆಳಕಂಡ ಯೋಜನೆಗಳಿವೆ.

೧. ಸಾಮಾನ್ಯ ಯೋಜನೆ.

೨. ವಿಶೇಷ ಭಾಗ ಯೋಜನೆ.

೩. ಎನ್.ಆರ್.ಇ.ಪಿ. ಯೋಜನೆ.

೪. ಜಿಲ್ಲಾ ಮಟ್ಟ ಉಪಯೋಜನೆ.

ಶಾಲಾ ಕಟ್ಟಡವಿಲ್ಲದ ಗ್ರಾಮಗಳಲ್ಲಿ ೭೦ ಶಾಲೆಗಳಿಗೆ ಶಾಲಾ ಕೊಠಡಿಗಳನ್ನು ಕಟ್ಟುವುದಕ್ಕೆ ಗುಲ್ಬರ್ಗ ಜಿಲ್ಲಾಧಿಕಾರಿಯವರಿಗೆ ಪ್ರಸ್ತಾವನೆಯನ್ನು ಕಳುಹಿಸಿದೆ. ಅದರಲ್ಲಿ ೧೦ ಕೊಠಡಿಗಳನ್ನು ಒಂದು ಶಾಲಾ ಕೊಠಡಿಗೆ ೬೦೦–೦೦ ರೂ.ನಂತೆಯೂ ಮತ್ತು ೧೨ ಕೊಠಡಿಗಳನ್ನು ಒಂದು ಶಾಲಾ ಕೊಠಡಿಗೆ ೫೫೦೦–೦೦ ರೂ.ನಂತೆಯೂ ಉಪಯೋಜನೆಯಲ್ಲಿ ನಿರ್ಮಾಣಕ್ಕೆ ತೆಗೆದುಕೊಂಡಿದೆ. ಉಳಿದ ೫೪ ಗ್ರಾಮಗಳಿಗೆ ಶಾಲಾ ಕೊಠಡಿ ಕಟ್ಟಲು ಮುಂದೆ ಬರುವ ವರ್ಷಗಳಲ್ಲಿ ಹಂತಹಂತವಾಗಿ ಕ್ರಮ ತೆಗೆದುಕೊಳ್ಳಲಾಗುವುದು.

## ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆ

೪೦ (೧೪೨) ಶ್ರೀ ಎಸ್.ಪಿ. ಗಂಗಾಧರಪ್ಪ (ತಿಪಟೂರು).—ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್‌ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ತಿಪಟೂರು ತಾಲ್ಲೂಕಿನ ಹೊನ್ನವಳ್ಳಿ, ಈಚನೂರು, ಮಡಿನೂರು, ಹಾಲ್ಕುರಿಗೆ ನೊಣವಿನಕೆರೆಗೆ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆ ಮೇರೆಗೆ ಈ ಊರುಗಳಲ್ಲಿ ಕುಡಿಯುವ ನೀರಿನ ತೊಂದರೆ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ತೊಂದರೆ ನಿವಾರಣೆಗೆ ಸರಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರು).—

ಅ) ತಿಪಟೂರು ತಾಲ್ಲೂಕಿನ ಈಚನೂರು, ಮಡೆನೂರು, ಹೊನ್ನವಳ್ಳಿ ಮತ್ತು ಪಾಲ್ಕುರಿಗೆ ನೊಣವಿನಕೆರೆ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವವಿರುವುದಿಲ್ಲ. ಆದರೆ ಜನಸಂಖ್ಯೆಯ ಹೆಚ್ಚಳದಿಂದ ಈಚನೂರು, ಮಡೆನೂರು ಮತ್ತು ನೊಣವಿನಕೆರೆ ಗ್ರಾಮಗಳಿಗೆ ನೀರು ಸರಬರಾಜನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ.

ಆ) ಈಚನೂರು:—ಈ ಗ್ರಾಮಕ್ಕೆ ನೀರು ಸರಬರಾಜನ್ನು ಅಭಿವೃದ್ಧಿಪಡಿಸಲು ತುಮಕೂರು ಜಿಲ್ಲಾಭಿವೃದ್ಧಿ ಮಂಡಳಿಯ ದಿನಾಂಕ ೧೫–೧೧–೮೩ರ ಸಭೆಯಲ್ಲಿ ಅಭಿವೃದ್ಧಿ ಯೋಜನೆಯನ್ನು ತೆಗೆದುಕೊಳ್ಳಲು ಶಿಫಾರಸು ಮಾಡಲಾಗಿದೆ. ಈ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.